## ಪುಸ್ತಕ ಪ್ರೀತಿ

ನಮ್ಮ ಮನೆಗೆ ಯಾರೇ ಬಂದರೂ ಅತಿಥಿ ಸತ್ಕಾರದೊಂದಿಗೆ ಪುಸ್ತಕ ಕೊಡುವುದು ರೂಢಿ. ಹೀಗೆ ಸಂಬಂಧಿಕರೊಬ್ಬರ ಮಗಳು ಮದುವೆಯಾದ ಹೊಸದರಲ್ಲಿ ಮಡಿಲಕ್ಕಿ ಹಾಕಿಸಿಕೊಳ್ಳಲು ನಮ್ಮ ಮನೆಗೆ ಬಂದಿದ್ದಳು. ನಾವು ಮಡಿಲಕ್ಕಿ ಹಾಕಿ, ಹುಡುಗಿಯ ಕೈಗೆ ಕವನ ಸಂಕಲನವೊಂದನ್ನು ಕೊಟ್ಟು ಆಶೀರ್ವಾದ ಮಾಡಿ ಕಳಿಸಿದೆವು. ಸ್ವಲ್ಪ ಹೊತ್ತಿನಲ್ಲಿ ಪಕ್ಕದ ಮನೆಯವರು ಬಂದು, 'ನೀವು ಪುಸ್ತಕ ಕೊಟ್ಟಿದ್ರಿ ಕಾಣತ್ತೆ, ನಮ್ಮ ಮನೆಯಲ್ಲಿ ಬಿಟ್ಟು ಹೋಗಿದ್ದಾರೆ, ತಕ್ಕಳ್ಳಿ' ಎಂದು ನಾನು ಕೊಟ್ಟ ಪುಸ್ತಕವನ್ನು ಮತ್ತೆ ನನ್ನ ಕೈಗಿತ್ತು ಹೋದರು. ಪುಸ್ತಕವನ್ನು ಮತ್ತೆ ಕಪಾಟಿನಲ್ಲಿ ಜೋಡಿಸಿಟ್ಟೆ.

**ಶೋಭಾ ಮಲ್ಕಿ ಒಡೆಯರ್**





## ವಾಟ್ಸ್‌ಆ್ಯಪ್ ಪರಿಹಾರ

ಬೆಂಗಳೂರಿನಲ್ಲಿ ನಮ್ಮಕ್ಕನ ಮಗನ ಮದುವೆಯ ಸಮಾರಂಭದ ಸಂದರ್ಭ. ಮದುವೆಗೆ ಎರಡು ದಿನ ಮುಂಚೆ ಹೂವೀಳ್ಯ ಶಾಸ್ತ್ರ ಏರ್ಪಡಿಸಲಾಗಿತ್ತು. ಅಂದು ಮುತ್ತೈದೆಯರಿಗೆ ಕಾಲು ತೊಳೆದು ಪಾದಪೂಜೆ ಮಾಡಿ ಬಾಗೀನ ಕೊಡುವುದು ಸಂಪ್ರದಾಯ. ಅಂದು ಮಳೆಯ ಕಾರಣ ಆಹ್ವಾನಿಸಿದ್ದವರು ಬರಲೇ ಇಲ್ಲ. ನಾವೆಲ್ಲ ಕಳವಳ ಪಡುತ್ತಿದ್ದಾಗ ನನ್ನ ಪತಿ, 'ಈಗ ಹೇಗೂ ವಾಟ್ಸ್‌ಆ್ಯಪ್ ಯುಗ. ಬಾಗೀನ ಸ್ವೀಕರಿಸಲು ಬರಲಾಗದ ಮಹಿಳೆಯರ ಪಾದದ ಫೋಟೊ ಕಳಿಸಿದರೆ ಅದಕ್ಕೆ ಪೂಜೆ ಮಾಡಬಹುದು' ಎಂದಾಗ ನೆಂಟರೆಲ್ಲರ ನಗು ತಾರಕಕ್ಕೇರಿತು.

**ಎನ್.ಪಿ. ಶೈಲಜಾ**

ಚಿತ್ರಗಳು: ಗಣೇಶ ಆಚಾರ್ಯ